**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ,**

**ಕೆ.ಆರ್.ನಗರ .**

**ಸಿ.ಸಿ ನಂಃ 1706/ 2021**

| | | |
|---|---|---|
| **ಸಾಕ್ಷಿಯ ಹೆಸರಃ** | **ಸಿ.ಎಂ. ಮಾದಪ್ಪ** | **ಪ್ರಾಸಾಃ 1** |
| **ತಂದೆಯ ಹೆಸರುಃ** | **ಲೇಟ್ ಮಹದೇವಪ್ಪ** | **ಚಾಸಾಃ 1** |
| **ವಯಸ್ಸುಃ** | **65 ವರ್ಷ** | **ದಿಃ 25-05-2026** |
| **ಉದ್ಯೋಗಃ** | **ನಿವೃತ್ತ ಪೋಲಿಸ್ ಉಪ-ನೀರಿಕ್ಷಕರು** | **ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.** |
| **ವಾಸ ಸ್ಥಳಃ** | **ಹೆಚ್.ಡಿ.ಕೋಟೆ** | |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ನಾನು ದಿಃ 27.11.2019 ರಿಂದ ದಿಃ 05.06.2020 ರವರೆಗೆ ನಾನು ಪೋಲಿಸ್ ಉಪ-ನಿರಿಕ್ಷಕನಾಗಿ ಸಾಲಿಗ್ರಾಮ ಪೋಲಿಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತಿರುತ್ತೇನೆ.

ದಿಃ 21.04.2021 ರಂದು ಬೆಳಿಗ್ಗೆ 4.30 ಗಂಟೆಗೆ ಸಾಲಿಗ್ರಾಮದ ಬಳ್ಳೂರು ರಸ್ತೆಯಲ್ಲಿರುವ ರಾಜು ವೈನ್ಸ್ ಮದ್ಯದ ಅಂಗಡಿ ತೆರೆದು ವ್ಯಾಪಾರ ಮಾಡುತ್ತಿದ್ದಾರೆ ಎಂದು ನನಗೆ ಬಾತ್ಮೀ ಬಂದಿದ್ದು, ನಮ್ಮ ಇಲಾಖಾ ವಾಹನದಲ್ಲಿ ನಾನು, ಚಾಸಾ-2, ಚಾಸಾ-4, ಚಾಸಾ-5, ಚಾಸಾ-7, ಚಾಸಾ-8 ರವರ ಜೊತೆ ಸ್ಥಳಕ್ಕೆ ಹೋಗಿ ನೋಡಿದಾಗ, ರಾಜು ವೈನ್ಸ್ ಮದ್ಯದ ಅಂಗಡಿಯ ಬಾಗಿಲು ತೆರೆದು ವ್ಯಾಪಾರ ಮಾಡುತ್ತಿರುವುದು ಕಂಡು ಬಂದಿರುತ್ತದೆ. ಸಮವಸ್ತ್ರದಲ್ಲಿದ್ದ ನಮ್ಮನ್ನು ಕಂಡು ಬಾರ್ ನಲ್ಲಿ ಇದ್ದ 4 ವ್ಯಕ್ತಿಗಳು ಓಡಲು ಪ್ರಯತ್ನ ಪಟ್ಟಿರುತ್ತಾರೆ. ನಾವು ಸದರಿ 4 ವ್ಯಕ್ತಿಗಳನ್ನು ಸುತ್ತುವರೆದು ಹಿಡಿದಾಗ, ಅವರ ಬಳಿ ಮದ್ಯ ತುಂಬಿದ 3 ಬಾಕ್ಸ್ ಗಳು ದೊರೆಕಿರುತ್ತವೆ.

ನಂತರ ಪಂಚರನ್ನು ಸ್ಥಳಕ್ಕೆ ಬರಮಾಡಿಕೊಂಡು ಪರಿಶೀಲಿಸಿದಾಗ ಸದರಿ ಮೂರು ಬಾಕ್ಸ್ ಗಳಲ್ಲಿ ತಲಾ ಒಂದು ಬಾಕ್ಸ್ ನಲ್ಲಿ 90 ಎಂ.ಎಲ್ ನ 96 ಒರಿಜಿನಲ್ ಚಾಯ್ಸು ವಿಸ್ಕಿಯ ಮದ್ಯ ತುಂಬಿದ ಟೆಟ್ರಾ ಪ್ಯಾಕೇಟ್ ಗಳು ಇದ್ದವು. ದೊರೆತ ಮದ್ಯಗಳ ಪೈಕಿ ಪ್ರತಿ ಬಾಕ್ಸ್ ನಿಂದ ತಲಾ 10 ಒರಿಜಿನಲ್ ಚಾಯ್ಸು ವಿಸ್ಕಿಯ ಮದ್ಯ ತುಂಬಿದ ಟೆಟ್ರಾ ಪ್ಯಾಕೇಟ್ ಗಳನ್ನು ರಾಸಾಯನಿಕ ವಿಶ್ಲೇಷಣೆಗಾಗಿ ಮಾದರಿಯಾಗಿ ಪಡೆಯಲಾಗಿರುತ್ತದೆ.

ನಂತರ ವಶಪಡಿಸಿಕೊಂಡ ಆರೋಪಿ ಮತ್ತು ಮದ್ಯಗಳ ಸಮೇತ ಠಾಣೆಗೆ ಮರಳಿ ಬಂದು ಠಾಣಾಧಿಕಾರಿಯವರಿಗೆ ಮುಂದಿನ ಕ್ರಮಕ್ಕಾಗಿ ವಹಿಸಿಕೊಡಲಾಯಿತು. ನಂತರ ವಶಪಡಿಸಿಕೊಂಡ ಮದ್ಯಗಳ ವಸ್ತುಪಟ್ಟಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿ ಸದರಿ ಮದ್ಯಗಳನ್ನು ರಾಸಾಯನಿಕ ವಿಶ್ಲೇಷಣೆಗಾಗಿ ಕಳಹಿಸಲು ಅನುಮತಿಯನ್ನು ಪಡೆದಿರುತ್ತೇನೆ.

ಓರಿಜಿನಲ್ ಚಾಯ್ಸ ಡಿಲಕ್ಸ ವಿಸ್ಕಿಯ 30 ಖಾಲಿ ಟೆಟ್ರಾ ಪ್ಯಾಕೇಟ್ ಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ಮುದ್ದೆ ಮಾಲು-1 ಎಂದು ಗುರುತಿಸಲಾಯಿತು. ಸಾಕ್ಷಿಯು ದೂರನ್ನು ಮತ್ತು ದೂರಿನಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಮಹಜರನ್ನು ಮತ್ತು ಮಹಜರಿನಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಮಹಜರನ್ನು ನಿಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು.

ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿ ಸಂಖ್ಯೆ -1, 3 ಮತ್ತು 4 ರವರನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. 2 ನೇ ಆರೋಪಿಯು ಗೈರು ಹಾಜರಿದ್ದು, 2 ನೇ ಆರೋಪಿಯ ಗುರುತಿಸುವಿಕೆಯ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ಆರೋಪಿಪರ ವಕೀಲರು ತಮ್ಮ ಅರ್ಜಿಯಲ್ಲಿ ಹೇಳಿರುತ್ತಾರೆ.

**ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಟಿ.ಜಿ ವಕೀಲರಿಂದ**

1. ಘಟನಾ ಸ್ಥಳವು ಖಾಸಗಿ ವ್ಯಕ್ತಿಗೆ ಸೇರಿದ ಆಸ್ತಿ ಆಗಿರುತ್ತದೆ. ನಾವು ಘಟನಾ ಸ್ಥಳಕ್ಕೆ ದಾಳಿ ಮಾಡುವ ಪೂರ್ವದಲ್ಲಿ ಮಾನ್ಯ ನ್ಯಾಯಾಲಯದಿಂದ ಯಾವುದೇ ಶೋಧನಾ ಸಮ್ಮುಚ್ಚಿತ ವಾರೆಂಟ್‌ನ್ನು ಪಡೆದಿರುವುದಿಲ್ಲ. ಘಟನಾ ಸ್ಥಳಕ್ಕೆ ದಾಳಿ ಮಾಡುವ ಪೂರ್ವದಲ್ಲಿ ಯಾವ ಕಾರಣದಿಂದ ನಮಗೆ ಮಾನ್ಯ ನ್ಯಾಯಾಲಯದಿಂದ ಶೋಧನಾ ಸಮ್ಮುಚ್ಚಿತ ವಾರೆಂಟ್‌ನ್ನು ಪಡೆಯಲು ಸಾಧ್ಯವಾಗಿರುವುದಿಲ್ಲ ಎಂದು ಮಾನ್ಯ ನ್ಯಾಯಾಲಯಕ್ಕೆ ನಾವು ಯಾವುದೇ ವಿವರಣೆಯನ್ನು ನೀಡಿರುವುದಿಲ್ಲ.

2. ನನಗೆ ಬೆಳಿಗ್ಗೆ 4.30 ಗಂಟೆಗೆ ಬಾತ್ಮೀ ಬಂದಿದ್ದು, ಬೆಳಿಗ್ಗೆ 4.35 ಗಂಟೆಗೆ ನಾವು ಘಟನಾ ಸ್ಥಳಕ್ಕೆ ಹೊರಟಿರುತ್ತೇವೆ. ನಾವು ಬೆಳಿಗ್ಗೆ 4.35 ಗಂಟೆಗೆ ಠಾಣೆಯಿಂದ ಹೊರಟು ಬೆಳಿಗ್ಗೆ 6.30 ಗಂಟೆಯವರೆಗೂ ಘಟನಾ ಸ್ಥಳದಲ್ಲಿಯೇ ಇದ್ದೇವು. ಪ್ರ.ವ.ವರದಿ ದಾಖಲಾದ ನಂತರದಲ್ಲಿ ನಾನು ಘಟನಾ ಸ್ಥಳದ ಮಹಜರನ್ನು ಮಾಡಿರುತ್ತೇನೆ. ನಾನು ಬೆಳಗಿನ ಜಾವ 4.35 ಗಂಟೆಗೆ ದೂರನ್ನು ಕೊಟ್ಟಿರುವುದಾಗಿ ನನ್ನ ನಿಪಿ.1 ರ ದೂರಿನಲ್ಲಿ ನಮೂದಿಸಿರುತ್ತಾರೆ ಎಂದರೆ ಸರಿ.

ನಾನು ಘಟನಾ ಸ್ಥಳಕ್ಕೆ ಹೋಗದೇ, ಠಾಣೆಯಲ್ಲಿಯೇ ಕುಳಿತು ನಿಪಿ.1 ರ ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

3. ನಿಪಿ.1 ರ ದೂರನ್ನು ಹೇಮಂತ್ ಕುಮಾರ್ ಎ.ಎಸ್.ಐ ರವರು ಪಡೆದು ಪ್ರ.ವ.ವರದಿಯನ್ನು ದಾಖಲಿಸಿರುತ್ತಾರೆ ಎಂದರೆ ಸರಿ. ರಾಜು ವೈನ್ಸ್ ಮತ್ತು ನಟರಾಜು ವೈನ್ಸ್ ಇವೆರಡ ಮಧ್ಯ 200 ಮೀಟರ್ ಅಂತರವಿದೆ ಎಂದರೆ ಸರಿ. ರಾಜು ವೈನ್ಸ್ ಮತ್ತು ನಟರಾಜು ವೈನ್ಸ್ ಇವೆರಡ ಮಧ್ಯ ಬೇರೆ ಖಾಸಗಿ ಜಾಗ ಮತ್ತು ಕಟ್ಟಡಗಳು ಇವೆ ಎಂದರೆ ಸರಿ. ರಾಜು ವೈನ್ಸ್ ಹಿಂಬದಿಯಲ್ಲಿ ಹೋಟೇಲ್ ಇದೆ ಸಾಕ್ಷಿಯು ನನಗೆ ಸರಿಯಾಗಿ ನೆನಪಿಲ್ಲ ಎಂದು ನುಡಿದಿರುತ್ತಾರೆ. ರಾಜು ವೈನ್ಸ್ ಹಿಂಬದಿಯಲ್ಲಿ ನಾನು ಆರೋಪಿತರನ್ನು ಬಂಧಿಸಿದಾಗ ರಾಜು ವೈನ್ಸ್ ಹಿಂಬದಿಯಲ್ಲಿ ಹೋಟೇಲ್ ಇದೆಯೋ ಇಲ್ಲವೋ ಎಂದು ಗಮನಿಸಿರುವುದಿಲ್ಲ.

4. ರಾಜು ವೈನ್ಸ್ ಹಿಂಬದಿಯಲ್ಲಿ ಯಾವುದೇ ಕಟ್ಟಡಗಳು ಇರಲಿಲ್ಲ. ಘಟನಾ ಸ್ಥಳದ ಪೂರ್ವಕ್ಕೆ ನಟರಾಜ್ ವೈನ್ಸ್ ಇದೆ ಎಂದು ನಾನು ನಿಪಿ.2 ರಲ್ಲಿ ಬರೆದಿರುವುದಿಲ್ಲ. ಯಾವ ಕಂಪನಿಯ ಮತ್ತು ಯಾವ ಬ್ರ್ಯಾಂಡಿನ ಮದ್ಯಗಳನ್ನು ಆರೋಪಿತರು ಮಾರಾಟ ಮಾಡುತ್ತಿದ್ದರು ಎಂದು ನಾನು ನಿಪಿ.1 ರಲ್ಲಿ ಬರೆದಿರುವುದಿಲ್ಲ ಎಂದರೆ ಸರಿ. ಲಾಕ್ ಡೌನ್ ಸಮಯದಲ್ಲಿ ಆರೋಪಿತರು ಮದ್ಯ ಮಾರಾಟ ಹಾಗೂ ಸಾಗಾಣಿಕೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಕೇವಲ ನಮ್ಮ ಠಾಣೆಯ ಹೆಚ್ಚಿನ ಪ್ರಕರಣಗಳ ಅಂಕಿ ಸಂಖ್ಯೆಗೋಸ್ಕರ ನನ್ನ ಮೇಲಾಧಿಕಾರಿಗಳ ಮಾತು ಕೇಳಿ ನಾನು ಆರೋಪಿತರ ವಿರುದ್ಧ ಈ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.2 ರ ದಾಖಲೆಯನ್ನು ನಾನು ಠಾಣೆಯಲ್ಲಿಯೇ ಸೃಷ್ಟಿಸಿದ್ದು, ಪಂಚರು ನಿಪಿ.2 ರ ದಾಖಲೆಗೆ ಘಟನಾ ಸ್ಥಳದಲ್ಲಿ ಸಹಿಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಸಲ್ಲಿಸಿದ ವಸ್ತುಪಟ್ಟಿ ಸಂಖ್ಯೆ 79/20 ರಲ್ಲಿ ವಶಪಡಿಸಿಕೊಂಡ ಮದ್ಯಗಳ ಸಿರಿಯಲ್ ಸಂಖ್ಯೆಗಳನ್ನು ನಮೂದಿಸಿರುವುದಿಲ್ಲ. ನಾನು ದಾಖಲೆಗಳನ್ನು ಈ ಪ್ರಕರಣಕ್ಕೋಸ್ಕರ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

1 ನೇ ಹೆಚ್ಚುವರಿ ಜೆಎಂಎಫ್‌ಸಿ ನ್ಯಾಯಾಧೀಶರು
ಕೆ.ಆರ್.ನಗರ